18	Renuka Sugars, Manoli	721.27	-	-
19	S.C.M. Sugars, Koppa **	**	**	**
20	Shamanur Sugars, Duggavathi	139.92	-	-
21	Sirguppa Sugars (Gowribidanur)*	*	*	*
22	Sirguppa Sugars(Desanur)*	*	*	*
23	Sundari Sugars, Kampli*	*	*	*
24	Ugar Sugar Works Ltd., Ugarkhurd	903.10	-	-
25	Venkateshwara Power Project, Bedkihal	-	391.11	-

N.B: Profit/Loss is taken after appropriation of interest, depreciation & Taxes.

* Factory did not work.

** New sugar Factory.

1836(2636) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜವಳಿ ಉದ್ಯಮಗಳು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿವೆ? ಅವುಗಳ ಆರ್ಥಿಕ ಸ್ಥಿತಿ ಸುಧಾರಿಸಲು ಏನು ಕ್ರಮ ತೆಗೆದುಕೊಂಡಿದೆ?

ಆ) ಸಹಕಾರ ವಲಯದಲ್ಲಿರುವ ಜವಳಿ ಉದ್ಯಮಗಳು ಆರ್ಥಿಕವಾಗಿ ಮುಗ್ಗಟ್ಟಿನಲ್ಲಿದ್ದು, ಅವುಗಳ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಸತೀಶ್ ಎಲ್.ಜಾರಕಿ ಹೊಳಿ (ಜವಳಿ ರಾಜ್ಯ ಸಚಿವರು):

ಅ) ಜವಳಿ ಇಲಾಖೆಯ ವ್ಯಾಪ್ತಿಯಲ್ಲಿ ಎರಡು ಉದ್ಯಮಗಳು ಇದ್ದು ಪುನರ್ ರಚನೆಗಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಯೋಜನೆಯನ್ನು ಸರ್ಕಾರ ಒಪ್ಪಿರುತ್ತದೆ. ರೇಷ್ಮೆ ಇಲಾಖೆಯಲ್ಲಿ ಏಳು ಉದ್ಯಮಗಳಿದ್ದು. ಆರ್ಥಿಕವಾಗಿ ಬಲಪಡಿಸಲು ಐದು ಉದ್ಯಮಗಳನ್ನು ವಿಲೀನಗೊಳಿಸಿ, ಎರಡು ಉದ್ಯಮಗಳನ್ನು ಮಾಡಲಾಗಿದೆ. ಈಗ ರೇಷ್ಮೆ ಇಲಾಖೆಯಲ್ಲಿ ನಾಲ್ಕು ಉದ್ಯಮಗಳು ಇರುತ್ತವೆ. ಈ ನಾಲ್ಕು ಉದ್ಯಮಗಳನ್ನು ಉನ್ನತೀಕರಿಸಲು ಸರ್ಕಾರವು ಈಗಾಗಲೇ ಅನುಮೋದನೆ ನೀಡಿರುತ್ತದೆ.

ಆ) ಸಹಕಾರ ವಲಯದಲ್ಲಿರುವ ಜವಳಿ ಉದ್ಯಮಗಳ ಅಭಿವೃದ್ಧಿಗೆ ಹಾಲಿ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಜೊತೆ, ಕೆಳಕಂಡಂತೆ ಕ್ರಮ ವಹಿಸಲಾಗಿದೆ.

♦ ಕೇಂದ್ರ ಸರ್ಕಾರ ಯೋಜನೆಯಾದ ತಾಂತ್ರಿಕ ಉನ್ನತೀಕರಣ ನಿಧಿ ಯೋಜನೆಯಡಿ (TUFS) ಆಧುನೀಕರಣ ಹಾಗೂ ವಿಸ್ತರಣೆಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ ಮುಂದುವರೆದು ಎನ್.ಸಿ.ಡಿ.ಸಿ. ಯೋಜನೆಯಡಿ ಸರ್ಕಾರದ ಮುಖಾಂತರ ಸಹಕಾರಿ ನೂಲಿನ ಗಿರಣಿಗಳ ಪುನಶ್ಚೇತನಕ್ಕೆ ಸಾಲ ಸೌಲಭ್ಯ ಒದಗಿಸಿದೆ.

♦ ಸಹಕಾರಿ ವಲಯದ ನೂಲಿನ ಗಿರಣಿಗಳಲ್ಲಿ ಸರ್ಕಾರದ ಸಾಲವನ್ನು ಶೇರು ಧನವಾಗಿ ಪರಿವರ್ತಿಸಲಾಗಿದೆ.

♦ ನೇಕಾರರ ವಿಶೇಷ ಪ್ಯಾಕೇಜ್ ಅನುಮೋದಿಸಿದ್ದು, 10 ಹೆಚ್.ಪಿ. 10 ವಿದ್ಯುತ್ ಮಗ್ಗಗಳು ಇರುವಂತಹ ಘಟಕಗಳಿಗೆ ರಿಯಾಯಿತಿ ನೀಡಲಾಗುತ್ತಿದೆ.

1837(2321) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗದ ವಸತಿ ನಿಲಯಗಳಲ್ಲಿ ಪ್ರತಿ ಮಕ್ಕಳಿಗೆ ತಲಾ ವೆಚ್ಚ ನೀಡುತ್ತಿರುವುದು ಹಿಂದಿನ ವರ್ಷದ ಕನಿಷ್ಠ ಪ್ರಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ನಿರ್ವಹಣಾ ವೆಚ್ಚ ಈಗ ದುಬಾರಿಯಾಗಿರುವುದರಿಂದ ವಸತಿ ನಿಲಯಗಳಲ್ಲಿ ಮಕ್ಕಳಿಗೆ ಆರೋಗ್ಯ ಮತ್ತು ಉತ್ತಮ ವ್ಯವಸ್ಥೆ ಒದಗಿಸುವಲ್ಲಿ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ) ಹಾಗಿದ್ದಲ್ಲಿ, ಹೆಚ್ಚಿನ ಸೌಲತ್ತು ಒದಗಿಸಲಾಗುವುದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಬಂದಿರುತ್ತದೆ.

ಇ) ಆಯವ್ಯಯದ ಲಭ್ಯತೆಯನ್ನನುಸರಿಸಿ ಹೆಚ್ಚಿನ ಸವಲತ್ತು ಒದಗಿಸುವುದನ್ನು ಪರಿಶೀಲಿಸಲಾಗುವುದು.

1838(2841) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾನುವಾರು ಗಣತಿಯ ಪ್ರಕಾರ ಜಾನುವಾರು ಮತ್ತು ಕುಕ್ಕುಟ ಸಂಪತ್ತಿನ ವಿವರಗಳೇನು:

ಆ) ಜಾನುವಾರುಗಳ ಆರೋಗ್ಯ ಸಂರಕ್ಷಣೆಗಾಗಿ ಮತ್ತು ಅಭಿವೃದ್ಧಿಗಾಗಿ ಒಟ್ಟು ಎಷ್ಟು ಪಶುವೈದ್ಯಕೀಯ ಆಸ್ಪತ್ರೆಗಳು ಚಿಕಿತ್ಸಾಲಯಗಳು ಹಾಗೂ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ:

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಪಶುವೈದ್ಯಕೀಯ ಕೇಂದ್ರಗಳ ಸೇವೆ ಏನು?